ಬೈಂದೂರು ವ್ಯಾಪ್ತಿಯ ಕಡಲು ತೀರದಲ್ಲಿ ಅಭಿವೃದ್ಧಿ

೨೮೮೪(೩೨೯೩)

ಶ್ರೀ ಕೆ.ಗೋಪಾಲ ಬಂಡಾರಿ(ಬೈಂದೂರು): ಮಾನ್ಯ ಪ್ರವಾಸೋದ್ಯಮ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೈಂದೂರು ವಿಧಾನಸಭಾ ವ್ಯಾಪ್ತಿಯ ಮರವಂತೆ ಕಡಲುತೀರದಲ್ಲಿ ಹೊನಲು ಬೆಳಕಿನ ಸೌಲಭ್ಯ ಒದಗಿಸಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಂಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ?

ಇ) ಈ ಪ್ರವಾಸೋಧ್ಯಮ ಅಭಿವೃದ್ಧಿಯನ್ನು ಎಷ್ಟು ಸಮಯದಲ್ಲಿ ಸಂಪೂರ್ಣಗೊಳಿಸಲಾಗುವುದು?

ಶ್ರೀ ಆರ್.ರೋಷನ್ ಬೇಗ್ (ಪ್ರವಾಸೋದ್ಯಮ ಹಾಗೂ ಹಜ್ ಸಚಿವರು):

ಅ) ಹೌದು.

ಆ) ಭಾರತ ಸರ್ಕಾರವು ಮೊದಲನೆಯ ಕಂತಿನ ಹಣವಾಗಿ ರೂ.೯.೦೦ ಲಕ್ಷಗಳನ್ನು ಬಿಡುಗಡೆ ಮಾಡಿದೆ.

ಇ) ಈ ಕಾಮಗಾರಿಯನ್ನು ನಿರ್ವಹಿಸುವ ಸಂಸ್ಥೆಯ ಆಯ್ಕೆ ಮಾಡಿದ ಕೂಡಲೇ ಕೆಲಸವನ್ನು ಕೈಗೆತ್ತಿಕೊಂಡು ಶೀಘ್ರವಾಗಿ ಮುಗಿಸಲಾಗುವುದು.

ಔರಾದ್ ತಾಲ್ಲೂಕಿನ ರಸ್ತೆ ದುರಸ್ತಿ

೨೮೮೬(೩೭೪೭)

ಶ್ರೀ ಗುಂಡಪ್ಪ ವಕೀಲ್(ಔರಾದ್): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧. ಔರಾದ್ ತಾಲ್ಲೂಕಿನ ನಾರಾಯಣಖೇಡದಿಂದ ಸಂಗಮ ಮಾರ್ಗ ಸಂತಪೂರ ಹಾಗೂ ಠಾಣಾ ಕುಶನೂರದಿಂದ ಬಾವಲಗಾಂವ ಜಿಲ್ಲಾ ಮುಖ್ಯ ರಸ್ತೆಗಳು ತುಂಬಾ ದುಸ್ಥಿತಿಯಲ್ಲಿದ್ದು ಸಾರ್ವಜನಿಕ ಉಪಯೋಗಕ್ಕೆ ಬಾರದೇ ಇರುವ ಸಂಗತಿ ಸರ್ಕಾರಕ್ಕೆ

ತಿಳಿದಿದೆಯೇ; ಹಾಗಿದ್ದಲ್ಲಿ ಇಂಥ ದುರಸ್ತಿ ಕೆಲಸದ ಸಲುವಾಗಿ ಸರ್ಕಾರ ಈವರೆಗೆ ಕೈಗೊಂಡ ಕ್ರಮವೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

೧. ಈ ರಸ್ತೆಗಳ ದುರಸ್ತಿಯ ಅವಶ್ಯಕತೆ ಸರ್ಕಾರದ ಗಮನಕ್ಕೆ ಬಂದಿದೆ. ರಸ್ತೆಗಳ ಡಾಂಬರೀಕರಣ ಮಾಡಿ ಬಹಳ ವರ್ಷಗಳಾಗಿದ್ದು ವಾರ್ಷಿಕ ನಿರ್ವಹಣೆಯಡಿ ಗುಂಡಿ ಮುಚ್ಚಲಾಗುತ್ತಿದೆ.

೧) ಸಂತಪೂರ-ನಾರಾಯಣಖೇಡ ರಸ್ತೆಯಲ್ಲಿ-೩.೦೦ ಲಕ್ಷ ರೂ. ವೆಚ್ಚದಲ್ಲಿ ೧೦ ಕಿ.ಮೀ. ಗುಂಡಿ ಮುಚ್ಚಲಾಗಿದೆ, ಉಳಿದ ಭಾಗದಲ್ಲಿ ಕೆಲಸ ಪ್ರಗತಿಯಲ್ಲಿದೆ.

೨) ಸಂಗಮ್-ಸಂತಪೂರ ರಸ್ತೆ ಠಾಣಾ ಕುಶನೂರ ಮಾರ್ಗ ಈ ರಸ್ತೆಯಲ್ಲಿ ೫ ಲಕ್ಷ ರೂ. ವೆಚ್ಚದಲ್ಲಿ ಗುಂಡಿ ಮುಚ್ಚುವ ಕಾರ್ಯ ನಡೆದಿದೆ.

೩) ಕುಶನೂರ್‌ದಿಂದ-ಬಾವಲಗಾಂವ್ ರಸ್ತೆಯಲ್ಲಿ ೨.೫೦ ಲಕ್ಷ ರೂ.ಗಳ ಗುಂಡಿ ಮುಚ್ಚುವ ಕಾರ್ಯ ಮುಗಿದಿದೆ, ೧೧.೫೦ ಲಕ್ಷ ರೂ.ಗಳ ಡಾಂಬರಿನ ಕಾಮಗಾರಿ ಪ್ರಗತಿಯಲ್ಲಿದೆ.

ಔರಾದ್ ತಾಲ್ಲೂಕಿನ ರಾಜ್ಯ ಹೆದ್ದಾರಿ ರಸ್ತೆ ದುರಸ್ತಿ

೨೯೮೭(೩೭೪೮)

ಶ್ರೀ ಗುಂಡಪ್ಪ ವಕೀಲ್(ಔರಾದ್): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧. ಔರಾದ್ ತಾಲ್ಲೂಕಿನ ರಾಜ್ಯ ಹೆದ್ದಾರಿ ರಾಯಚೂರ-ಮಾನಮಾರಪಳ್ಳಿ, ಜಹೀರಾಬಾದ-ನಾಂದೇಡ ಹೆದ್ದಾರಿ ತುಂಬಾ ಕೆಟ್ಟದ್ದು ದುರಸ್ತಿ ಹಾಗೂ ನಿರ್ವಹಣೆಯನ್ನು ಗುತ್ತಿಗೆದಾರರು ಮಾಡುತ್ತಿಲ್ಲ ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

೨. ಹಾಗಾದರೆ ಸರ್ಕಾರ ಕೈಗೊಂಡ ಕ್ರಮವೇನು?

೩. ಗುತ್ತಿಗೆದಾರರಿಂದ ಅಂಥ ಕಾಮಗಾರಿ ವಾಪಸ್ಸು ಪಡೆದು ಇಲಾಖೆವತಿಯಿಂದ ಕಾಮಗಾರಿ ನಿರ್ವಹಿಸಲಾಗುತ್ತದೆಯೇ?